*ಕರ್ನಾಟಕ ಸರ್ಕಾರ*

**ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ರವರ ಹೊರಡಿಸಿದ ನಡವಳಿಗಳು**

ವಿಷಯ:- ಸೊಸೈಟಿ ಫಾರ್ ಪಿಪಲ್ಸ್ ಇಂಟೀಗ್ರೇಟೆಡ್ ಡೆವಲಪ್‌ಮೆಂಟ್ (ರಿ), ಕಡೂರು ಈ ಸಂಸ್ಥೆಯವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಪೋಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ ನಡೆಸುತ್ತಿರುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಕ್ಕೆ 2014-15ನೇ ಸಾಲಿನ ರಾಜ್ಯ ಅನುದಾನ ಮಂಜೂರಾತಿ ನೀಡಿ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:-1) ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿಕ್ಕಮಗಳೂರು, ಇವರ ಪತ್ರ ಸಂಖ್ಯೆ:ಮಮಇ:ಹಿಸಕೇಂಅಬಿ:2014-15/207 ದಿನಾಂಕ:10.09.2014

2)ಸರ್ಕಾರದ ಆದೇಶ ಸಂ:ಮಮಇ:01:ಪಿಹೆಚ್‌ಪಿ:2014 ದಿನಾಂಕ:04.01.2014

3)ಸರ್ಕಾರದ ಆದೇಶ ಸಂ:ಮಮಇ:270:ಪಿಹೆಚ್‌ಪಿ:2013 ದಿನಾಂಕ:28.08.2013

4)ಸರ್ಕಾರದ ಆದೇಶ ಸಂ:ಮಮಇ:196:ಪಿಹೆಚ್‌ಪಿ:2014 ದಿ:24.06.2014

******

ಪ್ರಸ್ತಾವನೆ:-

ಸೊಸೈಟಿ ಫಾರ್ ಪಿಪಲ್ಸ್ ಇಂಟೀಗ್ರೇಟೆಡ್ ಡೆವಲಪ್‌ಮೆಂಟ್ (ರಿ), ಕಡೂರು ಈ ಸಂಸ್ಥೆಯವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಪೋಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ ಹೊಸದಾಗಿ ದಿ:14.07.2014 ರಂದು ಪ್ರಾರಂಭಿಸಿರುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಕ್ಕೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿಕ್ಕಮಗಳೂರು, ಮತ್ತು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಚಿಕ್ಕಮಗಳೂರು ರವರು ದಿನಾಂಕ:03.09.2014 ರಂದು ಜಂಟಿಯಾಗಿ ಭೇಟಿ ನೀಡಿ ತನಿಖೆ ಮಾಡಿ ವರದಿಯನ್ನು ಸಲ್ಲಿಸಿದ್ದು, ಸದರಿ ಸಂಸ್ಥೆಯವರು ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರವನ್ನು ಉತ್ತಮವಾಗಿ ನಡೆಸುತ್ತಿದ್ದು, 2014-15ನೇ ಸಾಲಿಗೆ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸಹಾಯವಾಣಿ ಕೇಂದ್ರದ ನಿರ್ವಹಣಾ ವೆಚ್ಚ ಹಾಗೂ ಸಿಬ್ಬಂದಿ ವೇತನ ವೆಚ್ಚಕ್ಕಾಗಿ ಅನುದಾನ ಬಿಡುಗಡೆ ಮಾಡುವಂತೆ ಉಲ್ಲೇಖ (1) ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಉಲ್ಲೇಖ (2) ರ ಪತ್ರದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ರವರು ಸರ್ಕಾರದ ಆದೇಶದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿರುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ರಾಜ್ಯದಲ್ಲಿ ಪ್ರಾರಂಭಿಸದೇ ಇರುವ ಜಿಲ್ಲೆಗಳಾದ 15 ಜಿಲ್ಲೆಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯು ಒಳಗೊಂಡಿರುವುದರಿಂದ 2014-15ನೇ ಸಾಲಿಗೆ ಸಂಸ್ಥೆಯು ಭರಿಸಬೇಕಾದ ರೂ.59,910/-ಗಳನ್ನು ಕಡಿತಗೊಳಿಸಿ, ಕೇಂದ್ರವನ್ನು ಪ್ರಾರಂಭಿಸಿರುವ ದಿನಾಂಕದಿಂದ ರೂ.5,39,186/-ಗಳನ್ನು 2014-15ನೇ ಸಾಲಿನ ಸಹಾಯವಾಣಿ ಕೇಂದ್ರಕ್ಕೆ ಮಂಜೂರು ಮಾಡಿ ಉಲ್ಲೇಖ (4) ರ ಆದೇಶದಲ್ಲಿ ಅನುದಾನವನ್ನು ಬಿಡುಗಡೆ ಮಾಡಲು ಅನುಮತಿ ನೀಡಿರುತ್ತಾರೆ. ಸದರಿ ಸಂಸ್ಥೆಯವರು ನಡೆಸಲಾಗುತ್ತಿರುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಕ್ಕೆ ಮೊದಲನೇ ಹಾಗೂ ಎರಡನೇ ತ್ರೈಮಾಸಿಕ ಕಂತಿನ ಆಯವ್ಯಯ ರೂ.2,69,593/- ಗಳನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ರವರಿಗೆ ಮಂಜೂರು ಮಾಡಿ ಬಿಡುಗಡೆ ಮಾಡಲುದ್ದೇಶಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸಂಖ್ಯೆ: ವಿಹಿನಾಸಇ:ಹಿನಾಕೋ:ಸಿ-1:ಹಿನಾಸಕೇ:ಚಿಕ್ಕಮಗಳೂರು:23:2014-15** 3047

ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ನಿರ್ದೇಶನಾಲಯ, ಪೋಡಿಯಂ ಬ್ಲಾಕ್,
ವಿ.ವಿ.ಕೇಂದ್ರ, ನೆಲಮಹಡಿ, ಬೆಂಗಳೂರು 560 001.
*ದಿನಾಂಕ:21.10.2014.*

**::ಆದೇಶ::**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳನ್ವಯಸೊಸೈಟಿ ಫಾರ್ ಪಿಪಲ್ಸ್ ಇಂಟೀಗ್ರೇಟೆಡ್ ಡೆವಲಪ್‌ಮೆಂಟ್ (ರಿ), ಕಡೂರು ಈ ಸಂಸ್ಥೆಯವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಪೋಲೀಸ್

ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ ನಡೆಸುತ್ತಿರುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ನಿರ್ವಹಣೆಗಾಗಿ 2014–15ನೇ ಸಾಲಿಗೆ ರೂ.5,39,186/– (ಐದು ಲಕ್ಷದ ಮೂವತ್ತೊಂಭತ್ತು ಸಾವಿರದ ಒಂದು ನೂರ ಎಂಭತ್ತಾರು) ಗಳನ್ನು ಮಂಜೂರು ಮಾಡಿ ಮೊದಲನೇ ಹಾಗೂ ಎರಡನೇ ತ್ರೈಮಾಸಿಕ ಕಂತಾಗಿ ರೂ.2,69,593/– (ಎರಡು ಲಕ್ಷದ ಅರವತ್ತೊಂಭತ್ತು ಸಾವಿರದ ಐದುನೂರ ತೊಂಭತ್ತ ಮೂರು ರೂಪಾಯಿಗಳು ಮಾತ್ರ) ಗಳ ಆಯವ್ಯಯವನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ರವರಿಗೆ ಬಿಡುಗಡೆ ಮಾಡಲಾಗಿದೆ. ಸಂಸ್ಥೆಯು ಸಲ್ಲಿಸುವ ಅನುದಾನ ಬಿಲ್ಲನ್ನು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿಕ್ಕಮಗಳೂರು ರವರು ಮೇಲು ಸಹಿ ಮಾಡಲು ತಿಳಿಸಿದೆ.

ಸದರಿ ಅನುದಾನವನ್ನು ಲೆಕ್ಕಶೀರ್ಷಿಕೆ:2235–02–104–2–04 ಯೋಜನೆ ಉಪಲೆಕ್ಕಶೀರ್ಷಿಕೆ:101 ಸಹಾಯಧನದಡಿಯಲ್ಲಿ 2014–15ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

## ಷರತ್ತುಗಳು

1. ಸರ್ಕಾರ/ಇಲಾಖೆಯಿಂದ ಪಡೆಯುವ ಅನುದಾನವನ್ನು ನಿಗದಿತ ಉದ್ದೇಶಕ್ಕೆ ಬಳಸಲಾಗುತ್ತದೆ ಎಂದು ತಪ್ಪಿದ್ದಲ್ಲಿ ಶೇ. 15% ಸರಳ ಬಡ್ಡಿಯೊಂದಿಗೆ ಇಲಾಖೆಗೆ ಹಿಂತಿರುಗಿಸುವುದಲ್ಲದೆ, ಸರ್ಕಾರದ ಹಣದ ದುರುಪಯೋಗದ ಆಧಾರದ ಮೇಲೆ ಕ್ರಿಮಿನಲ್ ಶಿಕ್ಷೆಗೆ ಒಳಗಾಗುತ್ತೀರಿ.
2. ಮುಚ್ಚಳಿಕೆಯು ಈ ಕೆಳಕಂಡ ಅಂಶಗಳನ್ನು ಸಹ ಒಳಗೊಂಡಿರಬೇಕು, ಸರ್ಕಾರದ ಆದೇಶ ಸಂಖ್ಯೆ:ಮಮಇ:265:ಎಸ್.ಜೆ.ಡಿ:2004 ದಿನಾಂಕ:27.11.2004 ರ ಮುಖಾಂತರ ಜಾರಿಗೆ ಬಂದಿರುವ ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳಿಗೆ ಅನುದಾನ ನೀಡುವ ಯೋಜನೆಗಳಲ್ಲಿನ ಎಲ್ಲಾ ನಿಯಮಗಳು ಷರತ್ತುಗಳು ಹಾಗೂ ನಿಬಂಧನೆಗಳಿಗೆ ಬದ್ಧರಾಗಿತಕ್ಕದ್ದು.
3. ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಗಳು, ಸೂಚನೆಗಳು ಹಾಗೂ ಆದೇಶಗಳನ್ನು ಪಾಲಿಸಲು ಸಂಸ್ಥೆಯು ಬದ್ಧವಾಗಿತತಕ್ಕದ್ದು.
4. ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ವೃದ್ಧ ಫಲಾನುಭವಿಗಳಿಂದ ಯಾವುದೇ ರೀತಿಯ ಶುಲ್ಕ, ದೇಣಿಗೆ, ವಂತಿಗೆ, ಕೊಡುಗೆ, ದಾನ, ಮುಂತಾದವುಗಳನ್ನು ಸ್ವೀಕರಿಸದೆ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರವನ್ನು ಸುವ್ಯವಸ್ಥಿತವಾಗಿ ನಡೆಸಲು ಸಂಸ್ಥೆಯು ಬದ್ಧವಾಗಿರತಕ್ಕದ್ದು,
5. ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಖರೀದಿಸಿ ಎಲ್ಲಾ ವಿಧವಾದ ಸ್ಥಿರ ಹಾಗೂ ಚರ ಆಸ್ತಿಗಳನ್ನು ದಾಖಲೆಗಳ ಸಮೇತ ಸರ್ಕಾರವು ಕೋರಿದ ಕೂಡಲೇ ಹಿಂತಿರುಗಿಸಲು ಸಂಸ್ಥೆಯು ಬದ್ಧವಾಗಿರತಕ್ಕದ್ದು.
6. ಅನುದಾನದ ಬಗ್ಗೆ ಲೆಕ್ಕ ಪತ್ರಗಳನ್ನು ಸುವ್ಯವಸ್ಥಿತವಾಗಿ ನಿರ್ವಹಿಸತಕ್ಕದ್ದು ಹಾಗೂ ಇಲಾಖೆಯ ಅಧಿಕಾರಿಗಳು ಸಂಸ್ಥೆಯ ತನಿಖೆಗೆ ಬಂದಾಗ ಅಥವಾ ಅನಿರೀಕ್ಷಿತ ಭೇಟಿ ನೀಡಿದಾಗ ಒದಗಿಸುವುದು.
7. ಸಂಸ್ಥೆಯು ಆಡಳಿತ ಮತ್ತು ಆರ್ಥಿಕ ಸುಸ್ಥಿತಿಯ ಬಗ್ಗೆ, ಅನುದಾನವನ್ನು ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ನಿರ್ವಹಣೆಗೆ ಮಾತ್ರ ಉಪಯೋಗಿಸುತ್ತೇವೆ, ಯೋಜನೆಯಲ್ಲಿದ್ದಂತೆ ಕಾರ್ಯಕ್ರಮಗಳನ್ನು ಸೇವೆಗಳನ್ನು ಯಶಸ್ವಿಯಾಗಿ ನಡೆಸುತ್ತೇವೆಂದು ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ಪ್ರಗತಿ ವರದಿಯನ್ನು ಕಾಲಕಾಲಕ್ಕೆ ಇಲಾಖೆಗೆ ಒದಗಿಸುತ್ತೇವೆಂದು ಪ್ರಮಾಣೀಕರಿಸತಕ್ಕದ್ದು.

8. "ಹೆಚ್ಚಿನ ಪ್ರಚಾರ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಕರೆಗಳು, ದೂರುಗಳು ಬರುವಂತೆ ಕ್ರಮವಹಿಸಲಾಗುವುದು" ಎಂಬ ಷರತ್ತಿಗೊಳಪಟ್ಟು ಅನುದಾನ ಬಿಡುಗಡೆ ಮಾಡುವುದು.

ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ, ಬೆಂಗಳೂರು.

**ಪ್ರತಿಯನ್ನು: ಈ ಕೆಳಕಂಡವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.**

1. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿಕ್ಕಮಗಳೂರು ಜಿಲ್ಲೆಯವರು ಸಂಸ್ಥೆಯವರಿಂದ ನಿಯಮಾನುಸಾರ ಷರತ್ತುಗಳ ಮುಚ್ಚಳಿಕೆಯನ್ನು ಪಡೆದು ಚೆಕ್ ವಿತರಿಸುವುದು ಹಾಗೂ ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದ ನಿರ್ವಹಣೆ ಬಗ್ಗೆ ಪರಿಶೀಲಿಸುವುದು.
2. ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆ, ಚಿಕ್ಕಮಗಳೂರು ಜಿಲ್ಲೆ ಇವರು ಸಂಸ್ಥೆಯ ಅನುದಾನ ಬಿಲ್ಲನ್ನು ಅಂಗೀಕರಿಸಿ ಧನಾದೇಶ ನೀಡುವಂತೆ ಕೋರಿದೆ.
3. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿಕ್ಕಮಗಳೂರು ಜಿಲ್ಲೆ ಇವರು ರೂ. 2,69,593/- ಗಳಿಗೆ ಅನುದಾನದ ಬಿಲ್ಲನ್ನು ಮೇಲು ಸಹಿ ಮಾಡುವುದು.
4. ಅಧ್ಯಕ್ಷರು/ಕಾರ್ಯದರ್ಶಿಗಳು, ಸೊಸೈಟಿ ಫಾರ್ ಪಿಪಲ್ಸ್ ಇಂಟೀಗ್ರೇಟೆಡ್ ಡೆವಲಪ್‌ಮೆಂಟ್ (ರಿ), ಕಡೂರು ಈ ಸಂಸ್ಥೆಯವರು ಚಿಕ್ಕಮಗಳೂರು ಜಿಲ್ಲೆ ಇವರು ರೂ.2,69,593/-ಗಳಿಗೆ ಅನುದಾನದ ಬಿಲ್ಲನ್ನು ಮೇಲು ಸಹಿಗಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿಕ್ಕಮಗಳೂರು ಜಿಲ್ಲೆ ರವರಿಗೆ ಸಲ್ಲಿಸತಕ್ಕದ್ದು.
5. ಉಪನಿರ್ದೇಶಕರು, ಖಜಾನೆಗಣಕಜಾಲ, ಖನಿಜ ಭವನ, ಬೆಂಗಳೂರು.
6. ಲೆಕ್ಕ ಅಧೀಕ್ಷಕರು, ಪ್ರಧಾನ ಕಛೇರಿ, ಬೆಂಗಳೂರು.
7. ಆಯವ್ಯಯ ಶಾಖೆ, ಪ್ರಧಾನ ಕಛೇರಿ, ಬೆಂಗಳೂರು.
8. ವೆಬ್‌ಸೈಟ್‌ವಿಭಾಗ, ಪ್ರಧಾನ ಕಛೇರಿ, ಬೆಂಗಳೂರು.
9. ಕಛೇರಿ ಪ್ರತಿ.

335.G.B.S.File/ARS

ಸೊಸೈಟಿ ಫಾರ್ ಪೀಪಲ್ಸ್ ಇಂಟೀಗ್ರೇಟೆಡ್ ಡೆವಲಪ್‌ಮೆಂಟ್ (ರಿ), ಕಡೂರು ಈ ಸಂಸ್ಥೆಯವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಪೋಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ ನಡೆಸುತ್ತಿರುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಕ್ಕೆ 2014-15 ನೇ ಸಾಲಿನ ರಾಜ್ಯ ಅನುದಾನಕ್ಕಾಗಿ ಬೇಕಾದ ಆಯವ್ಯಯದ ವಿವರ.

| ಕ್ರ.ಸಂ | ವಿವರ | ಮಾಹೆಯಾನ ಅನುದಾನ | ಪ್ರಸ್ತುತ ನೀಡುತ್ತಿರುವ ಅನುದಾನ | |
|---|---|---|---|---|
| ಎ | ಆವರ್ತಕ ವೆಚ್ಚಗಳು | | ದಿ:14-7-2014 ರಿಂದ 31.07.2014 ರವರೆಗೆ 18 ದಿನಗಳಿಗೆ | ಆಗಸ್ಟ್-2014 ರಿಂದ 2015-ಮಾರ್ಚ್-31 ರವರಗೆ 8 ತಿಂಗಳು |
| 1 | ಪ್ರಾಜೆಕ್ಟ್ ಕೋ-ಆರ್ಡಿನೇಟರ್ | ರೂ.12000*1 | ರೂ.6968/- | 96000/- |
| 2 | ಸಮಾಜ ಸೇವಕರು | ರೂ.10,000*3 | ರೂ.17418/- | 2,40,000/- |
| 3 | ಕಛೇರಿ ಸೇವಕರು | ರೂ.6000*1 | ರೂ.3484/- | 48,000/- |
| 4 | ಲೇಖನ ಸಾಮಾಗ್ರಿ | ರೂ.1000 | ರೂ.581/- | 8000/- |
| 5 | ಅಂಚೆ ಚೀಟಿ | ರೂ.1000 | ರೂ.581/- | 8000/- |
| 6 | ಪ್ರಯಾಣ ವೆಚ್ಚ | ರೂ.2000 | ರೂ.1161/- | 16000/- |
| 7 | ದೂರವಾಣಿ ವೆಚ್ಚ | ರೂ.1500 | ರೂ.871/- | 12000/- |
| 8 | ಪ್ರಚಾರ | ರೂ.1500 | ರೂ.871/- | 12000/- |
| 9 | ತುರ್ತು ಔಷಧಿ | ರೂ.2000 | ರೂ.1161 | 16000/- |
| | **ಒಟ್ಟು** | **-** | **33096** | **4,56,000/-** |
| ಬಿ | ಅನಾವರ್ತಕ ವೆಚ್ಚಗಳು: | | | |
| 1 | ಪ್ರಾಜೆಕ್ಟ್ ಪ್ರಾರಂಭ ಮತ್ತು ಪ್ರಚಾರಕ್ಕಾಗಿ | - | - | 20000/- |
| 2 | ಪೀಠೋಪಕರಣ ಮತ್ತು ಕಛೇರಿ ಸಾಮಾಗ್ರಿ | - | - | 50000/- |
| 3 | ಕಂಪ್ಯೂಟರ್, ಪ್ರಿಂಟರ್ ಮತ್ತು ಯು.ಪಿ.ಎಸ್ | - | - | 40000/- |
| | **ಒಟ್ಟು** | **-** | **-** | **1,10,000/-** |
| | **ಒಟ್ಟು ವೆಚ್ಚ** | - | **33096+4,56,000 +1,10,000=** | **5,99,096/-** |
| | | | **10% ಸಂಸ್ಥೆಯಿಂದ=** | **59910/-** |
| | | | **ಒಟ್ಟು=** | **5,39,186/-** |

(signature) 21/10

ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬೆಂಗಳೂರು.